ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) : ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು : ಉತ್ತರ ಒದಗಿಸುತ್ತಾರೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಈಗಾಗಲೇ ನಿಮ್ಮ ಹತ್ತಿರ ಉತ್ತರ ಇದೆ. ಅದಕ್ಕೆ ಬೇಕಾದಂತಹ clarification ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ಅವರು ಸಮಸ್ಯೆಯನ್ನು ಅರ್ಥ ಮಾಡಿಕೊಂಡಿಲ್ಲ. ಕಳೆದ ಸಾಲಿನ ಉತ್ತರ ಕೊಟ್ಟಿದ್ದೀರಿ. ನಾನು ಈ ವರ್ಷದ ಫಸಲು ಅಕ್ಟೋಬರ್, ನವೆಂಬರ್, ಡಿಸೆಂಬರ್ ಬಗ್ಗೆ ಕೇಳುತ್ತಿದ್ದೇನೆ. ನೀವು ಕೊಟ್ಟಿರತಕ್ಕಂಥ ಉತ್ತರ ಹಳೆಯ ಸಾಲಿನದ್ದು. ನಾನು ಕೇಳುತ್ತಿರುವುದು ಅದಲ್ಲ. ಮೊನ್ನೆ ಡಿಸೆಂಬರ್, ಜನವರಿ, ಫೆಬ್ರವರಿಯಿಂದ ಆಗಿರತಕ್ಕಂಥ ಫಸಲಿನಲ್ಲಿ ಏನು ನಷ್ಟವಾಗಿದೆ ಅವರಿಗೆ ಕೊಡುವಂತಹ ವಿಷಯ. ಹಳದಿ ರೋಗದ ಸಮಸ್ಯೆ ಅಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬರಲಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಕ್ಸಲ್ ಪೀಡಿತ ಪ್ರದೇಶದ ಬಗ್ಗೆ ಒಂದೇ ಒಂದು ವಿಷಯ.. . . .

ಅಧ್ಯಕ್ಷರು : ಆನಂತರ ಕೇಳಿ. ಈಗ ಮಾನ್ಯ ಎ. ಮಂಜುರವರು ಮಾತನಾಡುವುದು.

14) **ವಿಷಯ : ಅರಕಲಗೂಡು ಕ್ಷೇತ್ರದ ಅರಕಲಗೂಡು ಪಟ್ಟಣದಲ್ಲಿರುವ ತಹಶೀಲ್ದಾರ್ ಕಛೇರಿ ಎದುರು ಡಾ: ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರ ತ್ವರಿತವಾಗಿ ಅನುಮತಿಯನ್ನು ನೀಡಲು ಕ್ರಮ ಕೈಗೊಳ್ಳುವುದರ ಬಗ್ಗೆ**

ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುವುದೇನೆಂದರೆ, ನನ್ನ ಕ್ಷೇತ್ರದಲ್ಲಿ

ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆ ಮಾಡುವುದಕ್ಕೆ ದಯಮಾಡಿ ತಾವು ಅರಕಲಗೂಡು ಪಟ್ಟಣದಲ್ಲಿರುವ ತಹಶೀಲ್ದಾರ ಕಛೇರಿ ಎದುರಿನ ಜಾಗದಲ್ಲಿ permission ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಆ ಪ್ರಸ್ತಾವನೆ ತಹಶೀಲ್ದಾರರ ಆಫೀಸ್‌ಗೆ ಬಂದರೆ ನಾನು ಅಗತ್ಯ ಅನುಮತಿ ಕೊಡುತ್ತೇನೆ.

ಶ್ರೀ ಎ. ಮಂಜು : ಈಗಾಗಲೇ ಪ್ರಸ್ತಾವನೆ ಡಿ.ಸಿ. ಆಫೀಸ್‌ಗೆ ಬಂದಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಡಿ.ಸಿ. ಆಫೀಸ್‌ನಿಂದ ನನಗೆ ಬರಲಿ, ಅಗತ್ಯ ಅನುಮತಿ ಕೊಡುತ್ತೇನೆ. ಬೆಳಗ್ಗೆ ನಂಜೇಗೌಡರದ್ದು ಕೊಟ್ಟ ರೀತಿ ಇದನ್ನೂ ಕೊಡುತ್ತೇವೆ.

ಶ್ರೀ ಎ.ಮಂಜು : ಆಯಿತು.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರು ಮಾತನಾಡುವುದು.

ಶ್ರೀ ಕಿಮ್ಮನೆ ರತ್ನಾಕರ್ : ಕೆ.ಸಿ. ರೆಡ್ಡಿಯವರದ್ದು ಕೊಡುವುದಿಲ್ಲವೇ?

ಶ್ರೀ ಎಸ್. ಸುರೇಶ್ ಕುಮಾರ್ : ಅರಕಲಗೂಡಿನದ್ದು. . . . .

ಶ್ರೀ ಕಿಮ್ಮನೆ ರತ್ನಾಕರ್ : ಕೆ.ಸಿ. ರೆಡ್ಡಿಯವರ ಪುತ್ಥಳಿಯನ್ನೇ ವಿಧಾನ ಸೌಧದ ಬಳಿ ಇವತ್ತಿನವರೆಗೂ ಹಾಕುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ಮಾನ್ಯ ಕರಡಿ ಸಂಗಣ್ಣನವರು ಮಾತನಾಡುವುದು.

15) **ವಿಷಯ : ಡಾ.ಡಿ.ಎಂ.ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ವಿಷಯದ ಬಗ್ಗೆ**

ಶ್ರೀ ಕರಡಿ ಸಂಗಣ್ಣ : ಮಾನ್ಯ ಅಧ್ಯಕ್ಷರೆ, ಡಾ.ಡಿ.ಎಂ. ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸುರೇಶ್‌ಕುಮಾರ್ ರವರು ಉತ್ತರ ನೀಡುವುದು.